Regd. No. M 1290 SATYAVADI Published 1917
The Oldest Newspaper of Mysore

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎ೧. ವಿ. ಸುಬ್ಬಂತಯರಿಂದ ಸ್ಥಾಪಿಸಲ್ಪಟ್ಟದು)

ಸಂಪುಟ 32 ಸಂಚಿಕೆ 100 | ಗುರುವಾರ 27-1-49 ಬಿಡಿ ಪ್ರತಿ 3 ಪೈ

ಡಚ್ಚರಿಗೆ ಭಾರತ ಪ್ರತಿನಿಧಿಯು ಎಚ್ಚರಿಕೆ ?

— ದಿ ವ್ಯ ವಾ ಣಿ —

ಪೋಲೀಸರ ಕರ್ತವ್ಯ —

ಆಡಳಿತದಲ್ಲಿರುವ ಸರ್ಕಾರಕ್ಕೆ ನಿಷ್ಕಪಟ ಸೇವೆ ಸಲ್ಲಿಸುವುದೇ ಪೋಲೀಸರ ಕರ್ತವ್ಯ.

— ಸರ್ದಾರ್ ಪಟೇಲ್

ರೈಲಿನ ಪ್ರಥಮ ದರ್ಜೆ ದರ ಇಳಿಸಲ್ಪಟ್ಟಿರುವುದರಿಂದ ವಿಮಾನ ಪ್ರಯಾಣ ದರವನ್ನು ಕಡಿಮೆ ಮಾಡುವ ಅಂಶ ಭಾರತ ಸರ್ಕಾರದ ಗಮನದಲ್ಲಿರುವುದಾಗಿ ಕೇಂದ್ರ ಸಚಿವ ಶ್ರೀ ರಫಿ ಅಹ್ಮದ್ ಕಿದ್ವಾಯಿ ಬೆಂಗಳೂರ ಪತ್ರಿಕಾ ಸನ್ಮೇಳನದಲ್ಲಿ ತಿಳಿಸಿದರು

ಜನವರಿ ತಾ | 30 ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ನಿಧನ ದಿನ ಮಹಾತ್ಮರಿಗೆ ಗೌರವ ಸೂಚಿಸುವುದಕ್ಕಾಗಿ ಅಂದು ದಕ್ಷಿಣ ಭಾರತದ ಎಲ್ಲಾ ಸಿನಿಮಾ ಮಂದಿರಗಳೂ ಆ ದಿನವೆ ಒಂದಾ ಗಬೇಕೆ ಎಂದು ಭಾರತ ಫಿಲಂ ಛೆಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಶ್ರೀ ಕೆ ಸುಬ್ರಹ್ಮಣ್ಯಂ ಮದರಾಸಿನಿಂದ ಹೇಳಿಕೆಯಿತ್ತಿದ್ದಾರೆ

ಕಲ್ಲಿಕೋಟೆ, ಜ 26 — ಶ್ರೀ ಕೃಷ್ಣ ನಂಬೂದರಿ ಎಂಬುವರು ಆನೆಯು ವೇಲೆ ದೇವಂ ಪ್ರತಿಮೆಯನ್ನು ಹಿಡಿದು ಕೊಂಡು ಮೆರವಣಿಗೆಯಲ್ಲಿ ಬರುತ್ತಿದ್ದ ಬಾಣ ಬಿರುಸುಗಳ ಪ್ರಯೋಗ ಕಂಡು ಆನೆ ಬೆದರಿತು. ನಂಬೂದರಿ ಕೆಳಗೆ ಬಿದ್ದರು ಆನೆಯಿಂದ ತುಳಿಯಲ್ಪಟ್ಟು ಅವರು ಸತ್ತರೆಂದು ಒಟ್ಟಪಾಳ್ಯದಿಂದ ಬಂದ ಸುದ್ದಿ.

ಪಾಕೀಸ್ತಾನ ವಾರ್ತಾ ಸಚಿವ ಷಹಾಬುದ್ದೀನ್ ಭಾರತ ಪಾಕಿಸ್ತಾನಗಳ ಸಂಬಂಧ ಉತ್ತಮಗೊಂಡಿದೆಯೆಂದು ಡಕ್ಕಾದಲ್ಲಿ ತಿಳಿಸಿದರು

ಲೇಕ್‌ಸಕ್ಸಸ್, ಜ 26 — ವಿಶ್ವಸಂಸ್ಥೆಯಲ್ಲಿ ಇಂಡೋನೇಷಿಯಾ ಚರ್ಚೆ ಆರಂಭವಾಯಿತು. ಮಿಲಿಟರಿ ಶಕ್ತಿಗಿಂತ ಎಮಿಲಾದ — ಗಾಂಧೀಜಿಯ ಪ್ರಬಲ ಅಯುಧವಿದೆ ಎಂದು ಡಚ್ಚರನ್ನು ಎಚ್ಚರಿಸುತ್ತಾ ಭಾರತ ಪ್ರತಿನಿಧಿ ರಾಮುರಾಯರು ಇಂಡೋನೇಷ್ಯ ಸಮಸ್ಯೆ ಕುರಿತು ತಿಳಿಸಿದರು

ತಿರುವಾಂಕೂರು ಸಂಸ್ಥಾನ ಶಾಸನ ಸಭಾ ಭವನದ ಮುಂದಿದ್ದ ಸರ್ ಸಿ ಪಿ ಯವರ ಲೋಹದ ಪ್ರತಿಮೆಯನ್ನು ತೆಗೆಯಲಾಯಿತು.

ಅಂಚೆ ಮಾನೇರರ ಮುಷ್ಕರ ತಾತ್ಕಾಲಿಕವಾದುದೆಂದು ಬೆಂಗಳೂರು ಅಂಚೆಮಾನೇರರ ಸಭೆಯಲ್ಲಿ ಮಾತನಾಡುತ್ತಾ ಶ್ರೀ ರಫಿ ಅಹ್ಮದ್ ಕಿದ್ವಾಯಿ ತಿಳಿಸಿದ್ದಾರೆ.

ಲಂಡನ್, ಜ 26 — ಕಾಮನ್ ವೆಲ್ತ್ ರಾಷ್ಟ್ರಗಳಿಂದ ಮತ್ತು ಬ್ರಸಲ್ಸ್ ಒಪ್ಪಂದ ರಾಷ್ಟ್ರಗಳಿಂದ ಉತ್ತರ ಬರುವ ವರೆಗೆ ಇಸ್ರೇಲ್ ರಾಜ್ಯ ಒಗ್ಗೂಡಿಸುವಿಕೆಯ ಮನ್ನಣೆ ಘೋಷಿಸುವುದಿಲ್ಲವೆಂದು ಬೇವಿನ್ ತಿಳಿಸಿದರು.

ಚಳ್ಳಕೆರೆ ಗ್ರಾಮದೇವತೆ ಶ್ರೀ ಚಳ್ಳಕೇರಮ್ಮನ ಜಾತ್ರೆಯು ಸೆಪ್ಟಂಬರ್ ತಾ || 14 ರಂದು 5 ದಿನಗಳು ಜರುಗುತ್ತವೆ. ಜಾತ್ರೆಯ ಸಮಾರಂಭದಲ್ಲಿ ಪ್ರಾಣಿವಧೆ ಮಾಡುವುದಿಲ್ಲವೆಂದು ಹರಿಜನರು ಮುಚ್ಚಳಿಕೆ ಕೊಟ್ಟಿದ್ದಾರೆಂದು ಖಚಿತವಾದ ಸುದ್ದಿ.

ಹೈದರಾಬಾದು — ಪಂ || ನೆಹರುರವರು ಹೈದರಾಬಾದಿನ ನಿರಾಶ್ರಿತ ನಿಧಿಗೆ ಐವತ್ತು ಸಾವಿರ ರೂ. ಗಳನ್ನು ಇತ್ತಿದ್ದಾರೆ. ಇದು ವರೆಗೆ ಪಸೂಲಾ

ಹೋಟಲು ಮಾಲೀಕ

ಕುಂಭಕೋಣದಲ್ಲಿ ರೇಡಿಯೋ ಟ್ಯೂಬ್ ಸಾರ್ವಜನಿಕರಿಗೆ ಕರಕರೆ ಮಾಡಿದ ಒಬ್ಬ ಹೋಟಲು ಮಾಲೀಕನಿಗೆ ಐದು ರೂಪಾಯಿ ಜುಲ್ಮಾನೆಯಾಯಿತೆಂತೆ !

ಆಟಂ ಬಾಂಬು ಶಕ್ತಿ

ಬರೇ ಏಳು ಆಟಂ ಬಾಂಬುಗಳಿಂದ ಇಡೀ ನ್ಯೂಯಾರ್ಕ್ ನಗರವನ್ನು ವಿಧ್ವಂಸಗೊಳಿಸಬಹುದೆಂದು ಲಿಪ್ಪಿನೆಂಟ್ ಜನರಲ್ಲು ಗ್ರೂಲ್ಸ್‌ರವರು ಅಭಿಪ್ರಾಯ ವ್ಯಕ್ತಪಡಿಸಿದಾರೆ

[ಐ ಪಿ. ಎಸ್]

ಹೆಲ್‌ಸಿಂಕ್ : ಈ ವರ್ಷದಿಂದ ನ್ಯೂಸ್‌ಪ್ರಿಂಟ್ ರೇಷನ್ ವಜಾ ಆದುದರಿಂದ, ಫಿನ್‌ಲೆಂಡಿನಲ್ಲಿ 30 ಹೊಸ ಪತ್ರಿಕೆಗಳು ಪ್ರಾರಂಭವಾಗುತ್ತವೆ.

ನ್ಯೂಯಾರ್ಕ್ : 1948 ನೇ ಸಾಲಿನಲ್ಲಿ ಅನೇಕಾಂಕಾದಲ್ಲಿ 245 ಬಿಲಿಯನ್ ಸಿಗರೇಟುಗಳು ತಯಾರ್ಮಾಡಲ್ಪಟ್ಟವು.

ಲಂಡನ್ : ಪ್ರೋಗ್ರೆಸಿವ್ ಲೀಗಿನ ಯೋಜನೆಯಂತೆ ಆಟದಿಂದ ನಿವೃತ್ತರಾದ ಆಟಗಾರರಿಗೆ ಪ್ರತಿ ವರ್ಷವೂ ಪೌಂಡು 50 ರಂತೆ ಕೊಡಲಾಗುತ್ತಿದೆ

ಚಿತ್ರದುರ್ಗದ ಮೇಜಿಸ್ಟ್ರೇಟರು ಹನ್ನೊಂದು ಮಂದಿ ಅಪರಾಧಿಗಳಿಗೆ ತಲಾ ರೂ 100 ಜುಲ್ಮಾನೆ ತಪ್ಪಿದರೆ ತಲಾ 1 ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ಚಳ್ಳಕೆರೆ ತಾಲ್ಲೂಕು ಉಳ್ಳರ್ತಿ ಗ್ರಾಮದಿಂದ ರಾಯದುರ್ಗದ ಕಡೆಗೆ ಆದು ವಾಟೆ ಎತ್ತಿನ ಸಾಗಿಸುತ್ತಿದ್ದಾಗ ಸಿಕ್ಕಿ ಬಿದ್ದರು

ಮೈಸೂರು ಸಂಸ್ಥಾನದ ಪ್ರಮುಖ ಚಿತ್ರಮಂದಿರಗಳಲ್ಲೆಲ್ಲಾ ಪ್ರದರ್ಶನಕ್ಕೆ ಬರುತ್ತಿದೆ

ಗಳಲ್ಲಿ
ಸಬಾರದೇಕೆ?

- ಅಲಹಾಬಾದದ ಒಂದು ಸಭೆಯಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ಪ್ರಸಿದ್ಧ ಶಿಕ್ಷಣತಜ್ಞ ಶ್ರೀ ಡಿ. ಸಂಜೀವರಾಯರು, 'ರಾಮಾಯಣ ಭಾರತ ಮತ್ತು ಭಾಂತದ ಹಲವು ಪ್ರಸಿದ್ಧ ಗ್ರಂಥಗಳು ನಮ್ಮ ಶಾಲಾಕಾಲೇಜುಗಳಲ್ಲಿ ಕಲಿಸಲ್ಪಡದಿರುವುದು ಆಧುನಿಕ ಜೀವನದ ದುಂ ನ್ತಗಳಲ್ಲೊಂದೆನ್ನಬೇಕಾಗುತ್ತದೆ. ಮದರಾಸಿನಲ್ಲಿ ಸಂಸ್ಕೃತ ಭಾಷೆ ವ-ತ್ತು ಹಳೆಯ ಪ್ರಸಿದ್ಧ ಶಾಸ್ತ್ರಗಳಲ್ಲಿ ವೇದಗಳಲ್ಲಿ ಮತ್ತು ವೇದಗಳಲ್ಲಿ ನುರಿತ ಬ್ರಾಹ್ಮಣರಿಗೆ ಪ್ರೋತ್ಸಾಹ ದೊರೆಯದಿರುವದು ಕೇವಲ ಶೋಚನೀಯ ಈ ಸ್ಥಿತಿ ಎಷ್ಟು ಬೇಗ ಹೋಗುವುದು ಅಷ್ಟು ಲೇಸು' ಎಂದಿರುವರು.

ಪತ್ರಿಕೋದ್ಯೋಗಿ ಸಂಘ

ಮೈಸೂರು, ಜ 27 : ನಿನ್ನೆ ಸಂಜೆ ಮೈಸೂರು ಪತ್ರಿಕೋದ್ಯೋಗಿ ಸಂಘದ ವಾರ್ಷಿಕಾಧಿವೇಶನ ಜರುಗಿತು.

ಮುಂದಿನ ಸಾಲಿನ ಆಡಳಿತ ವರ್ಗಕ್ಕೆ ಈ ಮಹನೀಯರು ಚುನಾಯಿತರಾಗಿದ್ದಾರೆ : ಶ್ರೀ ಎಸ್. ಶ್ರೀನಿವಾಸಮೂರ್ತಿ, ಬಿ ಎ (ಅಧ್ಯಕ್ಷರು) ಶ್ರೀ ಟಿ ಕೃಷ್ಣರಾಯರು (ಉಪಾಧ್ಯಕ್ಷರು) ಮತ್ತು ಶ್ರೀ ಎಸ್ ಎಸ್. ಶಾಸ್ತ್ರಿ (ಕಾರ್ಯದರ್ಶಿ)

ಗೋರಕ್ಷಣೆ

ಮೈಸೂರು ಪಟ್ಟಣ ಒಂದರಲ್ಲಿಯೇ ಗೋಹತ್ಯನಿಷೇಧ ಶಾಸನದಿಂದ ವರ್ಷಂ ಪ್ರತಿ ಸುಮಾರು 3 ಸಾವಿರ ಗೋವುಗಳಿಗೆ ಜೀವನ ದಾನ ಮಾಡಿದಂತಾಗಿದೆ. ಗೋವೃದ್ಧಿಗೆ ಎತ್ತುಗಳ ಪಾಲನೆಯೂ ಅತ್ಯವಶ್ಯಕ. ಅವುಗಳ ವಧೆಯನ್ನೂ ನಿಲ್ಲಿಸಿದಲ್ಲಿ ಮೈಸೂರು ಪಟ್ಟಣ ಒಂದರಲ್ಲಿಯೇ ಸುಮಾರು 5000 ಎತ್ತುಗಳ ನಾಶವನ್ನ ನಿಲ್ಲಿಸಬಹುದು. ಜಮೀನಿಗೆ ಉಡು ಮತ್ತು ಕುರಿಗಳ ಗೊಬ್ಬರದಷ್ಟು ಉತ್ತಮ ಗೊಬ್ಬರ ಬೇರೊಂದಿರುವುದಿಲ್ಲ ಅವುಗಳ ನಾಶದಿಂದ ಜಮೀನಿಗೆ ಉತ್ತಮ ಗೊಬ್ಬರವಿಲ್ಲದೆ ಹಿಂದಷ್ಟು ಫಸಲು ಉತ್ಪತ್ತಿಯಾಗುತ್ತಿಲ್ಲ. ಈಗೀ ಗೊಬ್ಬರಗಳು ಕೆಲವು ವರ್ಷಗಳಿಗೂ ಉತ್ತಮ ಫಸಲು ಕೊಡುವಂತೆ ಕುವಾಗಲೀ ಕೃಮೇಣ ಇಳ್ಳಿಯುವುದಕ್ಕೆ ಹಾನಿಕಾರಿಗಳೇ ಎಂದು ಭಾವಿಸುವರು. (ಓಂ)

Woodlands

Morning Shows from 28-1-49

— ಬೆಳಗಿನ ಪ್ರದರ್ಶನ —

ಬೊಂಬಾಯಿವಾಲಿ

ನಾದಿಯಾ — ಜಾನ್ ಕವಾಸ್

ರಾಧಾರಾಣಿ — ಗರ್ಲ್‌ಬೋಟ್ ನಾಯಿ

ಅಭಿನಯಿಸಿರುವ ಅನೋಘ ಹಿಂದಿ ಚಿತ್ರ

Bambaiwali

ವುಡ್ ಲ್ಯಾಂಡ್ಸ್

21—1—49 ರಿಂದ

KAJAL

ಕಾಜಲ್

ಸೂರಯ್ಯ — ವಾಸ್ತಿ — ಗೋಪಿ

ಮುಂತಾದ ಪ್ರಮುಖ ತಾರೆಗಳು

ಪಾತ್ರವಹಿಸಿರುವ

ಮನಮೋಹನ ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ದಮ್ಮು (ಖಾಸ) ಗೆ

ಪ್ರಸಿದ್ಧ ಔಷಧಿ

ಈ ಪ್ರಖ್ಯಾತ ಚಿತ್ರಕೂಟ ಮೂಲಿಕೆಯನ್ನು ತಾ || 13-2-49 ಪೌರ್ಣಮಿ ದಿವಸ ಒಂದೇ ಹೊತ್ತು ಸೇವನೆ ನೂಪುವುದರಿಂದ ಗೂರಲು ರೋಗವು ಪೂರ್ಣವಾಗಿ ಗುಣವಾಗುವುದು.

Swami Sachchidanand
Swarg Ashram, Pili Kothi
CHITRAKOT (U. P. (

At Opera

ಹೊಸ ಆರ್ ಸಿ ಎ ಪಿ ಜಿ 240 ವಿಷಕ ಬದಲಾಯಿಸುವ ಪ್ರಯುಕ್ತ ನಿನ್ನೆ ಮತ್ತು ಇವತ್ತು ಆಟಗಳು ಪೂರ್ತಿ ನಿಲ್ಲಿಸಿರುತ್ತೆ.

— ತಾ || 28 ರಿಂದ —

ಮೋಹಿನಿ

ಅಮೋಘ 10 ನೇ ವಾರ

Protect the Cow

ಗೋರಕ್ಷಣೆ ನಡೆಯಲಿ

Edited, Printed and Published by M S Krishna Rao at the Satyavadi Press, Chamarjpuram Mysore

ಸಿನಿಮಾ ತಾರೆಗಳ ಸ್ಟೈಲಾ ಸಿಂ ಮತ್ತು ರಾಬರ್ಟ್ ಫ್ಲೈ

SHAKTI

SUDHA

A Superb Tonic

ಶಕ್ತಿಸುಧಾ

— ಫಸ್ಟ್ ಕ್ಲಾಸ್ ಟಾನಿಕ್

ಧಾತು ಪುಷ್ಟಿ